ಯುಟಿಲೈಜೇಷನ್ ಸರ್ಟಿಫಿಕೇಟ್ ಮುಂತಾದನ್ನು ಕೊಡಬೇಕಾಗುತ್ತದೆ. ಈಗ ಬಿಡುಗಡೆ ಮಾಡಿರುವ ಹಣವನ್ನು ಅವರು ಉಪಯೋಗಿಸಿಕೊಂಡ ಮೇಲೆ ಮುಂತ್ತಿ ಹಣ ಕೊಡುವ ವಿಚಾರವನ್ನು ಪರಿಶೀಲನೆ ಮಾಡಲಾಗುತ್ತದೆ.

ಪ್ರಶ್ನೆ ೨೬೫೫ (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ ೨೬೯೦ (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ ೨೬೦೭ (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ ೨೬೫೪.

ಅಧ್ಯಕ್ಷರು.—ಇದಕ್ಕೆ ಸಮಯ ಬೇಕೆಂದು ಕೇಳಿದ್ದಾರೆ.

ಶ್ರೀ ಕೆ.ಬಿ. ಶಾನಪ್ಪ.—ಇದು ಎರಡನೇ ಸಲ ಈ ರೀತಿ ಆಗಿರುವುದು. ಇದಕ್ಕೆ ಎರಡು ಲೈನ್‌ಗಳ ಉತ್ತರ ಕೊಡಬಹುದಾಗಿತ್ತು.

ಅಧ್ಯಕ್ಷರು.—ಅವರು ಸಮಯ ಕೇಳಿದ್ದಾರೆ. ಉತ್ತರ ಬಂದಮೇಲೆ ಅದನ್ನು ತಮ್ಮ ಊರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಕೆ.ಬಿ. ಶಾನಪ್ಪ.—ಹಾಗಿದ್ದರೆ ನಾನು ಪ್ರಶ್ನೆ ಏತಕ್ಕೆ ಕೇಳಬೇಕಾಗಿತ್ತು ?

ಅಧ್ಯಕ್ಷರು.—ಅವರು ಸಮಯ ಕೇಳಿದ್ದಾರೆ. ನಾನು ನಿಮ್ಮ ರಕ್ಷಣೆಗೆ ಬರುತ್ತೇನೆ. ಉತ್ತರ ಬಂದಕೂಡಲೇ ತಮಗೆ ಕಳುಹಿಸಿಕೊಡುತ್ತೇನೆ.

ಧಾರವಾಡ ಜಿಲ್ಲೆಯಲ್ಲಿ ಸಿಹಿ ನೀರಿನ ಕೊರತೆ

೨೬೯೦. ಶ್ರೀ ಎಂ.ಕೆ. ಕಂಲಕರ್ಣಿ (ನವಲಗುಂದ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯಂತ ರಾಜ್ ಮತ್ತು ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆ ನವಲಗುಂದ ಹಾಗೂ ನರಗುಂದ ತಾಲ್ಲೂಕುಗಳಲ್ಲಿ ಕುಡಿಯುವ ಸಿಹಿ ನೀರಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತುರ್ತು ಕೈಗೊಂಡ ಸ್ವರೂಪದ ಕ್ರಮಗಳೇನು ?

ಇ) ಕುಡಿಯುವ ನೀರಿನ ಕೆರೆಗಳ ಹೂಳನ್ನು ಪ್ರತಿ ವರ್ಷ ತೆಗೆಸುವ ಕ್ರಮವೇನಾದರೂ ಸರ್ಕಾರಕ್ಕೆ ಇದೆಯೆ ?

ಶ್ರೀ ಆರ್.ವಿ. ದೇಶಪಾಂಡೆ (ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ).—

ಅ) ಬಂದಿದೆ.

ಆ) ಕೊರತೆ ಇರುವ ಎಲ್ಲಾ ಗ್ರಾಮಗಳಿಗೂ ಕುಡಿಯುವ ಸಿಹಿ ನೀರು ಒದಗಿಸಲು ಟೆಕ್ನಾಲಜಿ ಮಿಷನ್ ಕಾರ್ಯಕ್ರಮದಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಇಲ್ಲ.

ಶ್ರೀ ಎಂ.ಕೆ. ಕಂಲಕರ್ಣಿ.—ಇಲ್ಲಿ ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ''ಇಲ್ಲ'' ಎಂದು ಹೇಳಿದ್ದಾರೆ ನವಲ್ಮ ಭಾಗದಲ್ಲಿ ಕುಡಿಯುವ ಸಿಹಿ ನೀರನ್ನು ಒದಗಿಸಲು ಟೆಕ್ನಾಲಜಿ ಮಿಷನ್ ಕಾರ್ಯಕ್ರಮದಡಿಯಲ್ಲಿ ಕ್ರಮ ತೆಗೆದುಕೊಂಡರೆ ಏನೂ ಉಪಯೋಗವಾಗುವುದಿಲ್ಲ. ಆದ್ದರಿಂದ ಕೆರೆಗಳ ಹೂಳನ್ನು ತೆಗೆಸಲು ಪ್ರತಿವರ್ಷವೂ ಬಜೆಟ್‌ನಲ್ಲಿ ಹಣ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ.—ಕುಡಿಯುವ ನೀರಿನ ಸಲುವಾಗಿ ಕೆರೆಗಳಲ್ಲಿರುವ ಹೂಳನ್ನು ಪ್ರತಿ ವರ್ಷ ತೆಗೆಸುವ ಕಾರ್ಯಕ್ರಮ ನಮ್ಮ ಇಲಾಖೆ ಮುಂದೆ ಇಲ್ಲ. ಇವೊತ್ತು ನವಲಗುಂದ ಮತ್ತು ನರಗುಂದ ಈ ಎರಡು ತಾಲ್ಲೂಕ್‌ಗಳಲ್ಲಿ ಮತ್ತು ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ.